


'ಒಳ್ಳೇದಾಗಲಿ' ಎಂದು ಬರೆದು ಕೆಳಗೆ ಕನ್ನಡದಲ್ಲಿ ತಮ್ಮ ಹೆಸರಿನ ಸಹಿ ಮಾಡಿದರು. ಹೀಗೆ ಮೊದಲ ಭೇಟಿಯಲ್ಲಿ ಬೆನ್ನುಡಿಗಾಗಿ ಹಸ್ತಪ್ರತಿ ಕೊಡಲು ಹೋಗಿದ್ದವನು, ಬೆನ್ನುಡಿಯನ್ನು ಬರೆಸಿಕೊಂಡೇ ಹೊರಬಂದಿದ್ದೆ. ಹೊರಬರುವಾಗ 'ಶಾಂತರಸರಿಗೆ ನನ್ನ ನಮಸ್ಕಾರ ಹೇಳ್ರಿ' ಅಂದರು.

ನಂತರ ಸುರಾನಾ ಕಾಲೇಜಿನಲ್ಲಿ ನಡೆದ ಬಿಡುಗಡೆ ಸಮಾರಂಭದಲ್ಲಿ ಹಿರಿಯರಾದ ಚಿರಂಜೀವಿ ಸಿಂಗ್ ಅವರು ಕೃತಿಯ ಬಗ್ಗೆ ಮಾತನಾಡಿದ ಮತ್ತೊಂದು ಭಾಗ್ಯವೂ ಘಟಿಸಿಬಿಟ್ಟಿತು. ಫೋನಿನಲ್ಲಿ ಅದರ ವರದಿಯನ್ನು ನೀಡಿದಾಗ ರಾಜೀವ ತಾರಾನಾಥರು 'ಚಿರಂಜೀವಿ ಸಿಂಗ್ ಅವರು ಮಾತಾಡಿದ್ದು ಸರಿ ಅದ. ಅವರು ಭಾಳ ತಿಳಕೊಂಡವರು' ಅಂದರು.

2

'ಮೌನ' ಗಜಲ್ ಸಂಕಲನಕ್ಕೆ ದೊರೆತ ಬೆನ್ನುಡಿ ಹರಕೆಯ ಮೂಲಕ ಆರಂಭವಾದ ರಾಜೀವ ತಾರಾನಾಥರ ಸಖ್ಯ ಮುಂದುವರೆದುದು 'ಮಯೂರ'ಕ್ಕೆ ಅವರ ಸಂದರ್ಶನವನ್ನು ಮಾಡುವ ಅವಕಾಶದ ಮೂಲಕ.

ಸಂಗೀತದ ಬಗ್ಗೆ ಗಂಧ-ಗಾಳಿ ಗೊತ್ತಿರದ ಆಂಗ್ಲ ದೈನಿಕದ ವರದಿಗಾರರೊಬ್ಬರು ಧಾರ್ಷ್ಟ್ಯದಲ್ಲಿ ಇವರನ್ನು ಎದುರುಗೊಂಡು, ಮಂಗಳಾರತಿ ಮಾಡಿಸಿಕೊಂಡು ಬಂದಿದ್ದರೆಂಬುದನ್ನು ಬಹಳ ಜನರ ಬಾಯಲ್ಲಿ ಕೇಳಿದ್ದೆ. ಮೇಲಾಗಿ ಅವರು ಯು.ಆರ್. ಅನಂತಮೂರ್ತಿಯವರ 'ಪ್ರಶ್ನೆ ಮತ್ತು ಇತರ ಕಥೆಗಳು' ಸಂಕಲನಕ್ಕೆ ಮುನ್ನುಡಿ ಬರೆದಿದ್ದವರು. 'ಸಂಸ್ಕಾರ' ಸಿನಿಮಾಕ್ಕೆ ಸಂಗೀತ ನಿರ್ದೇಶನ ಮಾಡಿದವರು. ಏನೋ ಅಡ್ಡೇಟಿನಲ್ಲಿ ಗುಡ್ಡೇಟು ಅಂತ ಬೆನ್ನುಡಿ ಬರೆಯಿಸಿಕೊಂಡದ್ದಾಗಿದೆ. ಇನ್ನು ಅವರನ್ನು ಸಂದರ್ಶಿಸುವ ಈ ಕೆಲಸವಂತೂ ಆಗೋ ಹೋಗೋ ಮಾತಲ್ಲ ಅಂತ ಹಿಂಜರಿಕೆ ಶುರುವಾಯಿತು. ಅಳುಕಿನಲ್ಲಿಯೇ ಅವರ ಮನೆಗೆ ಹೋದೆ. ಅವರು ಆಸ್ಪತ್ರೆಗೆ ಹೊರಡಲು ರೆಡಿಯಾಗಿದ್ದರು. ಥ್ರೆಪ್ಟಿನ್ ಎಂಬ ಬಿಸ್ಕತ್ತನ್ನು ತಾವೆರಡು ತಗೊಂಡು ನನಗೂ ಕೊಡುತ್ತ 'ಸ್ವಲ್ಪ ಕಹಿ ಮ್ಯಾಲ ಇರ್ತದ. ಆದ್ರ ಆರೋಗ್ಯಕ್ಕ ಒಳ್ಳೇದು. ತಿನ್ರಿ' ಎಂದರು. ವೈದ್ಯರಾಗಿರುವ, ಕವಿ ಅಡಿಗರ ಮಗನ ಕ್ಲಿನಿಕ್ಕಿಗೆ ಜೊತೆಯಲ್ಲೇ ಕರೆದೊಯ್ದರು. ಬಂದ ಮೇಲೆ